ಮಂತ್ರಿ ಮಾಗವರು ಬಹಳ ಭ್ರಷ್ಟಾಚಾರಿಗಳಪ್ಪ
ಏನಾಯಿತು ಕ್ರಮ ಇದರ ಮೇಲೆ ?
ಈ ಆರೋಪ ಕಂತೆಗಳ ಸರಮಾಲೆ

ಆಗುವುದೆ ಬರೀ ಗಾಳಿಯಲಿ ಹಾರುವ ತರಗೆಲೆ ?
ಜನರ ಅನುಮಾನವಿಷ್ಟೇ ಕಡೆಗೂ ದೊರಕುವುದಿಷ್ಟೇ
ಐದು ವರ್ಷದ ಆಡಳಿತದ ಕೊಡುಗೆ ಆಪಾದನೆ ಆಪರೋಪಗಳಗಡಿಗೆ
ವಿಚಾರಣೆಗಳ ಉಪಕ್ರಮಗಳ ನಾಟಕದಲ್ಲಿ ಗಟ್ಟಿಗುಳುಗಳು ರಂಗೋಲಿ ಕೆಳಗೆ ತೂರಿ
ಬಡಪಾಯಿಗಳು, ತರುಣರು ದೀನದಲಿತರು ಆಗುವರೆ ಬಲಿಪಶುವಿನ ಗುರಿ ?
ಜನರ ಸಂಶಯ ನಿವಾರಣೆಗೆ ನನ್ನದಿದು ಪ್ರಶ್ನೆ
ಆಗುವುದೆ ವಿಚಾರಣೆ, ಎಂತದ ವಿಚಾರಣೆ
ಎಂದಾದರೂ ಆದೀತೆ ? ಏನಾದರೂ ಆದೀತೆ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ,ಕಾಮಾಲೆ ಕಣ್ಣಿನ ರೋಗದಿಂದ ನರಳುತ್ತಿರುವವರಿಗೆ ಎಲ್ಲವೂ ಹಳದಿಯಾಗಿಯೇ ಕಾಣಿಸುತ್ತದೆ. ಅಂತಹವರಿಗೆ ಔಷಧಿ ನನ್ನಲ್ಲಿ ಇಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ ಆವರ ಕವಿತಾ ಶಕ್ತಿಯನ್ನು ಬೇರೆ ಇನ್ನಾವುದಾದರೂ ಒಳ್ಳೆಯ ಕೆಲಸಕ್ಕೆ ಉಪಯೋಗಿಸಿದ್ದರೆ ಒಳ್ಳೆಯದಿತ್ತು. ಇನ್ನೊಂದು ಮಾತನ್ನು ಹೇಳಿಬಿಡುತ್ತೇನೆ. ಆವರ ಈ ಕವನಕ್ಕೆ ನೋಬಲ್ ಪ್ರೈಸನ್ನು ಕೊಡುವುದಕ್ಕೆ ನಾವೆಲ್ಲಾ ಶಿಫಾರಸ್ಸು ಮಾಡಬಹುದು.

ಶ್ರೀ ಜಿ. ಎಸ್. ಆಚಾರ್ —ಈ ರೀತಿ ಉತ್ತರ ಕೊಡುವುದಲ್ಲ. ಎನ್‌ಕ್ವೈರಿ ಆಗುತ್ತದೆಯೋ ಇಲ್ಲವೋ ಹೇಳಿ.

(ಉತ್ತರವಿಲ್ಲ)

೧೪) ಬ್ರಹ್ಮಾವರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸುವುದು.

ಶ್ರೀ ಬಸವರಾಜ್.— ಮಾನ್ಯ ಅಧ್ಯಕ್ಷರೇ, ನನ್ನ ಮತದಾರರಕ್ಷೇತ್ರವಾದ ಬ್ರಹ್ಮಾವರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿರುತ್ತದೆ. ಇಲ್ಲಿ ೪ ಜನ ವೈದ್ಯಾಧಿಕಾರಿಗಳು ಬೇಕಾಗಿದ್ದು, ಈಗ ಒಬ್ಬ ಪಂಚಾಯಿತಿ ವೈದ್ಯಾಧಿಕಾರಿಗಳು ಇರುತ್ತಾರೆ. ೨ ತಿಂಗಳ ಹಿಂದೆ ೩ ವೈದ್ಯಾಧಿಕಾರಿಗಳು ಇದ್ದು ಆವರಲ್ಲಿ ಇಬ್ಬರನ್ನು ಅಲ್ಲಿಂದ ವರ್ಗಾಯಿಸಿ ಆ ಸ್ಥಾನಗಳಿಗೆ ಬೇರೆ ಇಬ್ಬರನ್ನು ಹಾಕದೆ ಇರುವುದರಿಂದ ಈ ಪರಿಸರದ ಜನರಿಗೆ ಅನಾನುಕೂಲವಾಗಿದೆ. ಆದುದರಿಂದ ಇಲ್ಲಿಗೆ ಕೂಡಲೇ ಇಬ್ಬರು ವೈದ್ಯಾಧಿಕಾರಿಗಳನ್ನು ನೇಮಿಸಬೇಕಾಗಿ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಮಾನ್ಯ ಆರೋಗ್ಯ ಸಚಿವರ ಪರವಾಗಿ ಉತ್ತರ ಹೇಳುವುದಾದರೆ, ಅವಶ್ಯಕತೆ ಮೇರೆಗೆ ಡಾಕ್ಟರ್ಸನ್ನು ನೇಮಿಸುವುದಕ್ಕೆ ವಿವಾರ್ಟು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

೧೫) ಉಡುಪಿ ಕುಂದಾಪುರಕ್ಕೆ ಸಂಪರ್ಕ ಕಲ್ಪಿಸುವ ತೋಜಗೋಳಿ ರಸ್ತೆಗೆ ಕ್ರಾಂಬರ್ ಹಾಕುವುದು.

ಶ್ರೀ ಬಿ. ಜಸವರಾಜು.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ, ಕುಂದಾಪುರ ತಾಲ್ಲೂಕುಗಳ ಒಳಭಾಗಕ್ಕೆ ಸಂಪರ್ಕ ಕಲ್ಪಿಸುವ ತೋಜಗೋಳಿ ಅಂಗಡಿ ರಸ್ತೆಯ ಕಥೆ

ಇದೊಂದು ನಿರಂತರ ವ ಧೆಯು ಅಸಹಕಾಯಕ ವ್ಯವಸ್ಥೆ ಈ ರಸ್ತೆಯು ಸ್ವಾಬರ ಕಟ್ಟಿ ಗೋಳಿ ಅಂಗಡಿ ಭಾಗದ ಧೂಳಿನ ಗೋಳು ಯಾವ 'ಸಾಹೇಬರಿಗೂ' ಮುಟ್ಟಿಲ್ಲವೆಂದರೆ, ಇದು ಈ ಭಾಗದ ಜನರ ದುರದೃಷ್ಟವೇ ಸರಿ. ಸಂಕಾರದ ಸಾರ್ವಜನಿಕ ಕಾಮಗಾರಿ ಇಲಾಖೆಯು ನಿರ್ವಹಣೆಯಲ್ಲಿರುವ ಈ ರಸ್ತೆಯಲ್ಲಿ ಬಹಳಷ್ಟು ಬಸ್ಸು, ಲಾರಿ ಮತ್ತು ಇನ್ನಿತರ ವಾಹನಗಳು ಸಂಚರಿಸುತ್ತಿದ್ದು ಅದಷ್ಟು ಬೇಗ ಈ ರಸ್ತೆಯ ಉಳಿದ ಭಾಗಕ್ಕೆ ಡಾಮರಿನ ಹೊದಿಕೆಯಾಗುವಂತೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದೂ ತತ್ಪರಿಣಾಮವಾಗಿ ಗೋಳಿ ಅಂಗಡಿಯವರ ಗೋಳು, ಅವರು ಧೂಳು ತಿನ್ನುವ ಅವಸ್ಥೆ, ಪಂಡರಿ ನವರ ತಕರಾರು, ಬಿಲ್ಲಾಡಿಯವರ ಬೊಬ್ಬೆ ತಪ್ಪಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.

## ೧೬) ತುಮಕೂರು ಜಿಲ್ಲೆಯಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ಕಾರ್ಯದರ್ಶಿಗಳನ್ನು ನೇಮಿಸುವುದು.

ಶ್ರೀ ಬಿ ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಇವರು ಅನೇಕ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳು ಇರುವುದಿಲ್ಲ. ಆದ್ದರಿಂದ ಈ ಸಹಕಾರ ಸಂಘಗಳ ಕಾರ್ಯ ಸ್ಥಗಿತವಾಗಿ, ಗ್ರಾಮಾಂತರ ಪ್ರದೇಶದ ಜನರಿಗೆ ಅಗತ್ಯ ವಸ್ತುಗಳ ವಿತರಣೆಗೆ ತೊಂದರೆಯಾಗಿದೆ. ಕಾರ್ಯದರ್ಶಿಗಳ ನೇಮಕಕ್ಕೆ ಇರುವಂಥ ತೊಂದರೆಯೇನು ? ಅದಷ್ಟು ಬೇಗ ಕಾರ್ಯದರ್ಶಿಗಳನ್ನು ನೇಮಕ ಮಾಡಿ, ಸೇವಾ ಸಹಕಾರ ಸಂಘಗಳು ಕಾರ್ಯನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.— ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳ ಹುದ್ದೆಗಳನ್ನು ಅದಷ್ಟು ಬೇಗ ತುಂಬಲು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ.

## 17) Extending Stipendary benefit to the Government nominees in Private Medical Colleges.

SRI D. A, CHINNAPPA.— The Government of Karanataka has been selecting candidtes and allot them for the various private medical colleges. in Karnataka State. It has been brought to the notice that while those students undergoing house-surgeon course in the hospital they have been denied the benefit of giving stipend. While givieng stipend to the students of Government medical colleges, it is just and proper to extend the same benefit to the medical students of Government nominee inthe private medical colleges. I draw the kind attention of the Government to take immediate action to extend the stipend benefit to the Government nominee students in private medical colleges who are undergoing house-surgeon courses.

SRI M RAGHUPATHY (Minister for Fisheries and Ports).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

## ೧೮) ದಕ್ಷಿಣಕನ್ನಡ ಜಿಲ್ಲಾಪರಿಷತ್ತಿಗೆ ಸಿಬ್ಬಂದಿಯನ್ನು ನೇಮಿಸುವುದು.

ಶ್ರೀ ವಸಂತ ವಿ ಸಾಲಿಯಾನ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪರಿಷತ್ತಿನ ಎಲ್ಲಾ ಇಲಾಖೆಗಳಲ್ಲಿ ಸುಮಾರು ೨೦೦೦ ಸಿಬ್ಬಂದಿಗಳ ಕೊರತೆಯಿದೆ ಎಂದು ತಿಳಿದು ಬಂದಿದೆ. ೧೯೮೭ಕ್ಕೆ